**ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ. ದ. ನ್ಯಾ. ದಂಡಾಧಿಕಾರಿಗಳ ನ್ಯಾಯಾಲಯ, ಆನೇಕಲ್.**

| | |
|---|---|
| ಒ ಎಸ್. ನಂ :- | 474/2016 |
| ಪಿ.ಡಬ್ಲ್ಯೂ | **1** |
| ದಿನಾಂಕ :- | **17.02.2025** |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಯರ ಪರ ವಕೀಲರಿಂದ**

ನಿಪಿ 1 ರಲ್ಲಿ ಮಾಡಿರುವ ಸಹಿಗಳ ಪಕ್ಕ ಇರುವ ಇಂಟು ಮಾರ್ಕ್ ದಿನಾಂಕ 07.12.2011 ರಂದು ಹಾಕಲಾಗದೆ. ಯಾರು ಯಾರು ನಿಪಿ 1 ಕ್ಕೆ ಸಹಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ನಿಪಿ 1 ರಲ್ಲಿ ಮುನಿಯಮ್ಮ ಎಂದು ಇರುವ ಸಹಿ ಅವರದಲ್ಲ ಎಂದರೆ ಗೊತ್ತಿಲ್ಲ. ನಿಪಿ 1 ತಯಾರಿಸಲು ನಮ್ಮ ತಂದೆ ಎರಡು ದಿನ ಮೊದಲು ಶ್ರೀನಿವಾಸ ಮೂರ್ತಿ ಎಂಬುವರಿಗೆ ಮಾಹಿತಿ ಕೊಟ್ಟಿರುತ್ತಾರೆ. ನಾರಾಯಣಸ್ವಾಮಿ ಮತ್ತು ರಮೇಶ ಎಂಬುವವರ ಸಹಿಗಳನ್ನು ಮೊದಲೆ ಪಡೆದು, ನಂತರ ಅದರಲ್ಲಿ ವಿಚಾರಗಳು ಟೈಪ್ ಮಾಡಿಸಿರುವ ವಿಚಾರ ನನಗೆ ಗೊತ್ತಿಲ್ಲ. ದಾವಾ ಆಸ್ತಿಯನ್ನು ಪ್ರತಿವಾದಿಯರು ರಸ್ತೆ ಉದ್ದೇಶಕ್ಕಾಗಿ ಮಾರಾಟ ಮಾಡಿರುತ್ತಾರೆ. ಆ ವಿಚಾರ ನಿಪಿ 1 ರಲ್ಲಿ ಬರೆದಿಲ್ಲ. ನಿಪಿ 1 ಅನ್ನು ನೊಂದಣಿ ಮಾಡಿಸದೆ ಇರುವ ಬಗ್ಗೆ ನನಗೆ ಗೊತ್ತಿಲ್ಲ. ನಿಪಿ 1 ಅನ್ನು ಯಾವಾಗ ಖರೀದಿ ಮಾಡಿದರು ನನಗೆ ಗೊತ್ತಿಲ್ಲ. ನಿಪಿ 1 ರ ವಿಚಾರವಾಗಿ ಆಗಿರುವ ಮಾತುಕತೆಯ ಬಗ್ಗೆ ನನಗೆ ಖುದ್ದಾಗಿ ಗೊತ್ತಿಲ್ಲ ಎಂದರೆ ಸರಿ. ನಿಪಿ 1 ರ ವ್ಯವಹಾರ ಎಷ್ಟು ದಿವಸದಲ್ಲಿ ಪೂರ್ಣಗೊಳಿಸಬೇಕೆಂದು ಅದರಲ್ಲಿ ಬರೆದಿರುವ ಬಗ್ಗೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯಲ್ಲಿ ಇರುವ ಚೆಕ್ ಬಂದಿ ದಾವಾ ಆಸ್ತಿಯ ಪೂರಾ ಚೆಕ್ ಬಂದಿ ಎಂದರೆ ಸರಿ. ಸರ್ವೆ ನಂ 54/2 ರ ಆಸ್ತಿಯ ಪೂರ್ವಕ್ಕೆ ಇನಾಮತಿ ಜಮೀನು ಇದೆ ಎಂದರೆ ಸರಿ. ಅದರ ನಂತರ ನಮ್ಮ ತಂದೆಯ ಜಮೀನು ಎಂದರೆ ಸರಿ. ಆ ಕಾರಣ ದಾವಾ ಆಸ್ತಿಯ ಪೂರ್ವಕ್ಕೆ ತಪ್ಪು ಚೆಕ್ ಬಂದಿ ಕೊಡಲಾಗಿದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಚೆಕ್ ಬಂದಿಗೆ ಸಂಬಂಧಪಟ್ಟಂತೆ ದಾಖಲೆ ಒದಗಿಸುತ್ತೇನೆ.

ಪ್ರತಿವಾದಿಯರು ದಾವಾ ಆಸ್ತಿಯನ್ನು ಮಾರಾಟ ಮಾಡುವ ಅವಶ್ಯಕತೆ ಇರಲಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿ ನಮಗೆ ದಾರಿಗಾಗಿ ಬೇಕು ಎಂಬುದರ ಬಗ್ಗೆ ನಿಪಿ 1 ರಲ್ಲಿ ನಮೂದು ಮಾಡಲು ಏನು ತೊಂದರೆ ಇತ್ತು ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ. ಜಗದೀಶ ಅವರ ವಿರುದ್ದ ನಾನು ಏನು ಕ್ರಮ ಜರುಗಿಸಿಲ್ಲ. ದಾವಾ ಆಸ್ತಿಯ ಬಗ್ಗೆ ನಿಪಿ 1 ಆಗುವ ಕಾಲಕ್ಕೆ ಹಾಗೂ ಈಗಲೂ ಸಹ ಪ್ರತಿವಾದಿಯರ ಮತ್ತು ಬೇರೆಯವರ ನಡುವೆ ತಕರಾರು ಇದೆ ಎಂದರೆ ಸರಿ. ಆ ವಿಚಾರ ನಮಗೆ ಗೊತ್ತಿದ್ದರೂ ಸಹ ನಿಪಿ 1 ರಲ್ಲಿ ದಾವಾ ಆಸ್ತಿ ಬಗ್ಗೆ ಯಾವುದೇ ದಾವಾಗಳು ಇಲ್ಲ ಎಂದು ಬರೆಸಿದ್ದೇವೆ ಎಂದರೆ ಗೊತ್ತಿಲ್ಲ. ನಿಪಿ 1 ರಲ್ಲಿ ಸಹಿ ಮಾಡಿರುವ ಸಾಕ್ಷಿದಾರರು ನಮಗೆ ಬೇಕಾದವರು ಎಂದರೆ ಸರಿಯಲ್ಲ. ನಿಪಿ 4 ರ ಬಗ್ಗೆ ನನಗೆ ಮಾಹಿತಿ ಇಲ್ಲ. ನಿಪಿ 4 ರಲ್ಲಿ ಹಾಗೂ ನಿಪಿ 1 ರಲ್ಲಿ ದಾರಿ ಬಗ್ಗೆ ಹೇಳದೆ, ಮೊದಲನೇ ಬಾರಿಗೆ ದಾವಾದಲ್ಲಿ ಹೊಸ ವಿಚಾರ ಹೇಳಿದ್ದೇವೆ ಎಂದರೆ ಗೊತ್ತಿಲ್ಲ. ನಿಪಿ 8 ರ ಬಗ್ಗೆ ಮಾಹಿತಿ ಇದೆಯಾ ಎಂದರೆ ಸಾಕ್ಷಿ ನನಗೆ ಅದರ ಬಗ್ಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ನಿಪಿ 1 ಅನ್ನು ಸಾಲದ ವಿಚಾರವಾಗಿ ಮಾಡಿಕೊಂಡಿರುವುದು ಎಂದರೆ ಸರಿಯಲ್ಲ. ನಿಪಿ 1 ಅನ್ನು ಹಣಕಾಸಿನ ವಿಚಾರವಾಗಿ ಮಾಡಿಕೊಂಡ ಕಾರಣ, ನಮ್ಮ ತಂದೆ ನಿಪಿ 1 ರ ಬಗ್ಗೆ ಅವರ ಜೀವಿತ ಕಾಲದಲ್ಲಿ

ಯಾವುದೇ ಕ್ರಮ ಜರುಗಿಸಿಲ್ಲ ಎಂದರೆ ಸರಿ. 2015 ರಲ್ಲಿ ಕ್ರಯ ಪತ್ರ ಮಾಡಿಕೊಡಿ ಎಂದು ಪ್ರತಿವಾದಿಯರ ಬಳಿ ಕೇಳಿರುತ್ತೇನೆ. ದಾವಾ ಆಸ್ತಿಯ ಬಗ್ಗೆ ನಿಪಿ 1 ಆಗುವ ಕಾಲಕ್ಕೆ ದಾಖಲಾತಿ ಪರಿಶೀಲನೆ ಮಾಡಿಲ್ಲ. ನಾವು ಪ್ರತಿವಾದಿಯರಿಗೆ ಚೆಕ್ ಅಥವಾ ಬ್ಯಾಂಕ್ ಮುಖಾಂತರ ಹಣ ಕೊಡಲು ತೊಂದರೆ ಇರಲಿಲ್ಲ ಎಂದರೆ ಸರಿ. ಪ್ರತಿವಾದಿಯರು ಕ್ರಯ ಪತ್ರ ಮಾಡಿಕೊಡಲು ಭಾಧ್ಯರಲ್ಲ ಎಂದರೆ ಸರಿಯಲ್ಲ. ದಾಖಲೆ ಸೃಷ್ಟಿ ಮಾಡಿ ಪ್ರತಿವಾದಿಯರ ಆಸ್ತಿ ಲಪಾಟಾಯಿಸಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದ ಮುಖಾಂತರ ಬೆರಳಚ್ಚು ಮಾಡಿಸಿ ಸಾಕ್ಷಿದಾರನಿಗೆ ಓದಿ ಹೇಳಲಾಯಿತು)**

ಓ.ಹೇ.ಕೇ. ಸರಿ ಇದೆ.

**Sd/-**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ**
**ಪ್ರ.ದ.ನ್ಯಾಯಿಕ.ದಂಡಾಧಿಕಾರಿಗಳು, ಆನೇಕಲ್.**